ಓ. ಎಸ್. ನಂಬರ:-8/2025

ಪಿ.ಡಬ್ಲೂ-:-1 : ಅನೀತಾ ಗಂಡ ಬಾಬು ಹಣಜಿ

ದಿನಾಂಕ:- 26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು</u> : <u>ಶ್ರೀ ಕೆ ಜಿ ಪಿ ವಕೀಲರಿಂದ</u>.

ನನಗೆ ೩ ಜನ ಸಹೋದರರು ಮತ್ತು ೩ ಜನ ಸಹೋದರಿಯರು ಇರುತ್ತಾರೆ. ಸುಮಿತ್ರಾ, ಲಕ್ಷ್ಮೀಬಾಯಿ ಮತ್ತು ಇಂದ್ರಬಾಯಿರವರು ನನ್ನ ಸಹೋದರಿಯರಾಗಿರುತ್ತಾರೆ. ಹುಚ್ಚಪ್ಪ, ಗಂಗಪ್ಪ, ಚಂದ್ರಶಾರವರು ನನ್ನ ಸಹೋದರರಾಗಿರುತ್ತಾರೆ. ನನ್ನ ಮಗಳನ್ನು ನನ್ನ ಸಹೋದರನಾದ ೬ನೇ ಪ್ರತಿವಾದಿ ಚಂದ್ರಶಾರವರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ಅವರ ಮದುವೆ ಆಗಿ ಸುಮಾರು ೮ ವರ್ಷಗಳಾಗಿರುತ್ತವೆ. ನನ್ನ ಮಗಳಾದ ವೈಶಾಲಿ ಈಗ ೪ ವರ್ಷದಿಂದ ನಮ್ಮ ಮನೆಯಲ್ಲಿಯೆ ಇರುತ್ತಾಳೆ. ದಾವಾ ಜಮೀನುಗಳನ್ನು ನನ್ನ ಅಣ್ಣತಮ್ಮಂದಿರು ಕೂಡಿ ಇದ್ದಾಗ ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ದಾವಾ ಜಮೀನುಗಳನ್ನು ಖರೀದಿ ಮಾಡಿ ೨೬ ವರ್ಷಗಳಾಗಿರುತ್ತವೆ. ನಮ್ಮ ತಂದೆ ಸಿದ್ದಪ್ಪರವರು ಮೃತರಾಗಿ ೮ ವರ್ಷಗಳಾಗಿರುತ್ತವೆ.

೨. ನನ್ನ ಮಗಳಾದ ವೈಶಾಲಿಗೆ ಈಗ ೨೬ ವರ್ಷ ವಯಸ್ಸು ಆಗಿರುತ್ತದೆ. ನನ್ನ ಮದುವೆ ಆಗಿ ಸುಮಾರು ೩೮ ವರ್ಷಗಳಾಗಿರುತ್ತವೆ. ನನ್ನ ಸಹೋದರ ಹುಚ್ಚಪ್ಪರವರು ಮೊದಲು ಮುಂಬೈಯಲ್ಲಿ ಇದ್ದ ಎಂದರೆ ಸರಿ. ಅವನು ಚಿಕ್ಕವನಿದ್ದಾಗ ದುಡಿಯಲು ಮುಂಬೈಗೆ ಹೋಗಿದ್ದ ಎಂದರೆ ಸರಿ. ಸದರಿ ಹುಚ್ಚಪ್ಪ ನಮ್ಮ ಮನೆಯ ಹಿರಿಯ ಮಗ ಎಂದರೆ ಸರಿ. ನನ್ನ ಸಹೋದರ

ಹುಚ್ಚಪ್ಪನೆ ನನ್ನ ಮತ್ತು ನನ್ನ ಸಹೋದರಿಯರ ಮದುವೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಅಣ್ಣತಮ್ಮಂದಿರು ಮತ್ತು ನಮ್ಮ ತಂದೆ ಎಲ್ಲರೂ ಸೇರಿಕೊಂಡು ನಮ್ಮ ಮದುವೆಗಳನ್ನು ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ಮದುವೆಗಳನ್ನು ಮಾಡಲು ನಮ್ಮ ಮನೆಯಲ್ಲಿ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಸಹೋದರ ಚಂದ್ರಶಾ ಒಬ್ಬನೆ ನನ್ನ ಮಗಳ ಮದುವೆ ಆದ ನಂತರ ಸಾಲ ಮಾಡಿಕೊಂಡಿರುತ್ತಾನೆ. ನಮ್ಮ ತಂದೆ ದುದ್ದಣಗಿ ಗ್ರಾಮದಲ್ಲಿಯೆ ಇದ್ದರು.

೩. ನನ್ನ ಸಹೋದರ ಹುಚ್ಚಪ್ಪ ಕಟ್ಟಡ ಕಟ್ಟುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಲ್ಲಿ ಹುಚ್ಚಪ್ಪನಿಗೆ ಒಳ್ಳೆಯ ಆದಾಯ ಬರುತ್ತಿತ್ತು ಎಂದರೆ ಸರಿ. ನನ್ನ ಸಹೋದರ ಗಂಗಾರಾಮ ದುಬೈಗೆ ಎರಡೆರಡು ವರ್ಷದಂತೆ ಎರಡು ಬಾರಿ ಹೋಗಿದ್ದ. ನನ್ನ ತಂದೆ-ತಾಯಿಯನ್ನು ನನ್ನ ಸಹೋದರ ಹುಚ್ಚಪ್ಪ ಒಬ್ಬನೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಗೆ ಖರ್ಚು-ವೆಚ್ಚಕ್ಕೆ ಹಣವನ್ನು ನೀಡಿ, ಅವರನ್ನು ಹುಚ್ಚಪ್ಪ ಒಬ್ಬನೆ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಮ್ಮ ತಂದೆ ಊರಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದರು. ನಮ್ಮ ತಂದೆಗೆ ದಿನಕ್ಕೆ ೮ ರಿಂದ ೯೦೦ ರೂಪಾಯಿ ಕೂಲಿ ಸಿಗುತ್ತಿತ್ತು. ೨೬ ವರ್ಷಗಳ ಹಿಂದೆ ನಮ್ಮ ತಂದೆಗೆ ಎಷ್ಟು ಕೂಲಿ ಇತ್ತು ಎಂದು ನನಗೆ ಗೊತ್ತಿಲ್ಲ. ೨೬ ವರ್ಷಗಳ ಹಿಂದೆ ೨ ರಿಂದ ೩ ರೂಪಾಯಿ ಮಾತ್ರ ಕೂಲಿ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.